ಲಾಯರ್ ಹನುಮಂತರಾಯಪ್ಪ ಪಾರವ್ವ ಮತ್ತು ಅವಳ ಗಂಡನ್ನ ಕರೆಸಿದರು.

'ಅದು ನಡೆದಿದ್ದು ನಿಜ ಸ್ವಾಮೀ, ನಾವು ಸತ್ತರೂ ಸಾಕ್ಷಿ ಹೇಳಲ್ಲ. ಸಾಲಕ್ಕೆ ನಮ್ಮ ಎರಡೆಕೆರೆ ಹೊಲ ಒತ್ತೆ ಬಿದ್ದದೆ. ಮನ್ಯಾಗ ಹರೇದ ಹುಡುಗೀರದಾರೆ. ಅವರು ಏನು ಮಾಡಕ್ಕೂ ಹೇಸಲ್ಲ. ನಾವು ಬಡವ್ರು. ನಮ್ಮನ್ನ ಬದುಕಾಕೆ ಬಿಡ್ರೀ...' ಏನು ಹೇಳಿದರೂ ಒಪ್ಪದೇ ಅವರು ಎದ್ದು ಹೋದ ಮೇಲೆ ಹನುಮಂತರಾಯಪ್ಪ ಹೇಳಿದರು.

'ನೋಡು ತಾಯೀ, ನಿನ್ನ ಬಂಗಾರ ಎತ್ತಿಟ್ಟಾ. ಊರ ನಡುವೆ ಇರಾ ದೊಡ್ಡ ಕುಲಕರ್ಣೇರ ಮನಿಯ ದಾನ ಪತ್ರ, ನಿನ್ನ ಗಂಡನ ಪಾಲಿನ ಆರೆಕರೆ ಪಾಲಾದ ಪತ್ರ ನಂತಾಕೆ ಇರ್ಲಿ. ಉಳಿದ್ದೆಲ್ಲ ವಾಪಸ್ ಇಡು. ನಿನ್ನ ಗಂಡನ್ನ ಕೊಂದಾರೆ ನಿಜ. ಆಸ್ತಿ, ಮನಿ ನಮಗಿರಲಿ. ಮಕ್ಕಳಾದರೆ ಮನಿ ಹೋಗ್ತದೆ ಅಂತ ಕೊಂದಾರೆ. ಸಾಕ್ಷಿ ಬೇಕು. ಹೆಣ ಸುಟ್ಟಾರೆ. ಡಾಕ್ಟ್ರು ಹೃದಯಾಘಾತದಿಂದ ಸತ್ತಾನೆ ಅಂತ ಸರ್ಟಿಫಿಕೇಟ್ ಕೊಟ್ಟಾರೆ. ಸಾಕ್ಷಿ ಇಲ್ಲದೇ ಏನೂ ಮಾಡಕ್ಕಾಗಲ್ಲ. ನಿನಗೆ ಮನೆ, ಆರೆಕರೆ ಹೊಲಾ ಕೊಡಿಸ್ತೀನಿ' ಎಂದು ಪತ್ರ ಬರೆದು ಆಕೀ ಸೈನಾಕಿಸಿಕೊಂಡು ಕಳಿಸಿದರು.

ಕೋರ್ಟ್ ನೋಟೀಸ್ ಕೊಟ್ಟಿತು. ಊರ ಜನಾನೂ ಆಕಿಗೆ ಬೆಂಬಲ ಕೊಟ್ಟರು. ಅವರೆಲ್ಲ ಊರ ಹೊರಗಿದ್ದ ಅವರ ಮನೆಗೆ ಹೋದರು. ಊರ ನಡುವಿನ ಕುಲಕರ್ಣೇರ ಮನಿ, ಗಂಡನ ಆರೆಕರೆ ಹೊಲ ಆಕೆಯ ಪಾಲಿಗೆ ಬಂತು. ಕೆಂಪು ಸೀರೆಗಳನ್ನು ಬಚ್ಚಲೊಲೆಗೆ ಹಾಕಿ ಸುಟ್ಟು ಆಕೆ ಬಣ್ಣದ ಸೀರೆ ಉಟ್ಟಳು. ಕೂದಲು ಬೆಳೆಸಿದಳು. ಊರ ಜನರ ಜೊತೆಗೆ ಬೆರೆತಳು. ಅವರ ಪಾಲಿಗೆ ಅಕ್ಕವ್ವನಾದಳು.

ಹೊಲದಾಗ ದುಡಿದು ಬೆಳೆ ಬೆಳೆದಳು. ಜೊತೆಗಿರಲಿ ಎಂದು ಎರಡು ತೋಳದಂತ ನಾಯಿ ಸಾಕಿದಳು. ನಾಕು ಎಮ್ಮೆ ಕಟ್ಟಿ ಹಾಲು ಮಾರಿದಳು.

ಒಂದು ರಾತ್ರಿ ಕಟಾವಿಗೆ ಬಂದಿದ್ದ ಆಕೆಯ ಹೊಲಕ್ಕೆ ಬೆಂಕಿ ಬಿದ್ದು ಬೆಳೆ ಪೂರಾ ಸುಟ್ಟುಹೋಯಿತು. ಊರ ಜನ ಅಯ್ಯೋ ಅಂದರು. 'ಪೊಲೀಸ್ ಸ್ಟೇಷನ್‌ಗೆ ದೂರು ಕೊಡವ್ವಾ... ಇದು ನಿನ್ನ ಅತ್ತೇಮನರ್ದೇ ಕೆಲಸ' ಅಂದರು.

ಅಕ್ಕವ್ವ ನಡೂರಾತ್ರಿ ನಾಯಿಗಳ ಜೊತೆಗೆ ಸೀದಾ ಊರ ಹೊರಗಿನ ಅತ್ತೆಯ ಮನೆಯ ಬಳಿ ಹೋಗಿ ದಬದಬ ಬಾಗಿಲು ಬಡಿದಳು. 'ಏ ಮಾವಾ, ಅತ್ತೀ ಹೊರಾಗೆ ಬರ್ರೀ' ಅಂತ ಕೂಗಿದಳು. ಬಾಗಿಲು ತೆರೆದು ಅವರು ಹೊರ ಬಂದಾಗ ಹೇಳಿದಳು.

'ನೀವೇ ನನ್ನ ಹೊಲಕ್ಕೆ ಬೆಂಕೀ ಹಚ್ಚಿಸೀರಿ. ನೀವು ಮನುಷ್ಯರಲ್ಲ ಪಿಶಾಚಿಗಳು. ನನಗೆ ಮದ್ದು ಹಾಕಿ ನನ್ನ ಬಸಿರಿಳಿಸೀರಿ. ಆಸ್ತಿ, ಮನೆ ಆಸೆಗೆ ಹೊರಸಿನ ಮೇಲೆ ಮಲಗಿದ್ದ ನನ್ನ ಗಂಡನ ಮಕಕ್ಕೆ ದಿಂಬಿಟ್ಟು ಇಬ್ಬರು ಅಣ್ಣಂದಿರೂ ಸೇರಿ ಉಸಿರು ಕಟ್ಟಿಸಿ ಸಾಯಿಸೀರಿ. ಅದನ್ನು ನೋಡಿದ ಜನ ಅದಾರೆ, ಸಾಕ್ಷಿ ಅದೆ. ನಾನೇ ಬ್ಯಾಡ ಅಂತ ಸುಮ್ಮಿದೀನಿ. ನೀವು ನನ್ತಂಟೆಗೆ ಬಂದರೆ ಕೋರ್ಟಿನಾಗೆ ಕೇಸಾಕ್ಸಿ ನಿಮ್ಮನ್ನ ಜೈಲಿಗಾಕಿಸ್ತೀನಿ. ನಾನು ನಮ್ಮಪ್ಪನಿಗೆ ಹುಟ್ಟಿದ ಮಗಳು. ಯಾರಿಗೂ ಹೆದರಲ್ಲ. ನಿಮ್ಮ ಪಾಡಿಗೆ ನೀವಿದ್ರೆ ಸರಿ. ಇಲ್ಲದಿದ್ರೆ ಜೈಲಿಗೋಕ್ತೀರಿ' ಎಂದವಳೇ ವಾಪಸ್ ಬಂದಿದ್ದಳು.

ಅದೇ ಮೊದಲು ಅದೇ ಕೊನೆ. ಅವರು ಅವಳ ತಂಟೆಗೆ ಬರಲಿಲ್ಲ. ಎರಡು ಮೂರು ವರ್ಷದಾಗೆ ಅವರ ಪಾಲಿನ ಮನೆ, ಆಸ್ತಿ ಮಾರಿ ಮಕ್ಕಳ ಓದಿಗೆ ಅಂತ ಪೇಟೆಗೆ ಹೋಗಿ ನೆಲೆಸಿದರು.

ಅಕ್ಕವ್ವ ಊರ ಜನರ ಜೊತೆಗೆ ಬೆರೆತಳು. ಬಡ ಹುಡುಗರನ್ನು ಓದಿಸಿದಳು, ನೌಕರಿ ಕೊಡಿಸಿದಳು. ಬಡವರ ಮಕ್ಕಳ ಮದುವೆಗೆ ಸಹಾಯ ಮಾಡಿದಳು. ಹುಡುಗರು ಅವಳ ಮನೆಗೆ ಓದಲು ಬರ್ತಿದ್ದರು. ಶಂಕ್ರಪ್ಪ ಮೇಷ್ಟ್ರಿಗೆ ಸಂಬಳ ಕೊಟ್ಟು ಪಾಠ ಹೇಳಿಸಿದಳು. ಐದಾರು ಹೊಲಿಗೆ ಮಿಷಿನ್ ಕೊಂಡು ಅವಳ ಮನೆಯಲ್ಲೇ ಹೆಣ್ಣುಮಕ್ಕಳಿಗೆ ಬಟ್ಟೆ ಹೊಲಿದುಕೊಳ್ಳಲು ಹೇಳಿದಳು. ಎರಡು ಸಾರಿ ಗ್ರಾಮ ಪಂಚಾಯಿತಿ ಅಧ್ಯಕ್ಷಳಾಗಿ ಅಭಿವೃದ್ಧಿ ಕಾರ್ಯ ಮಾಡಿದಳು. ಇನ್ನು ಆಸ್ಪತ್ರೆ ಊರಿಗೆ ಬರಲಿ. ಊರಿನೋರು ಸುಖವಾಗಿರಲಿ. ನನ್ನ ಬದುಕು ಸಾರ್ಥಕ ಎಂದುಕೊಂಡಳು.

ಕತ್ತಲು ಕವಿಯಿತು. ಓದುವ ಹುಡುಗರು ಚೀಲ ಹೊತ್ತು ಬಂದರು. ಶಂಕ್ರಪ್ಪ ಮೇಷ್ಟ್ರು 'ಏನವಾ, ಕತ್ತಲಾಗೈತೆ. ದೀಪ ಹಚ್ಚಿಲ್ಲ' ಅಂದರು.

ಅಕ್ಕವ್ವ ಒಳಗೆ ಹೋಗಿ ದೀಪದ ಸ್ವಿಚ್ ಒತ್ತಿದಳು ಮನೆ ಜಗ್ಗನೆ ಬೆಳಕಾಯಿತು. ಜೊತೆಗೆ ಅಕ್ಕವ್ವನ ಮಕವೂ ಬೆಳಗಿತು. ●